ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ,
ಕುಂದಾಪುರ

ಸಿ.ಸಿ. ನಂಬ್ರ:1783/2013

ಚಾಸಾ: 13 ಫ್ರಾಸಾ:9

ದಿನಾಂಕ: 17-11-2022

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ಸಂತೋಷ |
| ತಂದೆಯ ಹೆಸರು | : | ಕೃಷ್ಣಯ್ಯ ಪೂಜಾರಿ |
| ವಯಸ್ಸು | : | 30 ವರ್ಷ |
| ಉದ್ಯೋಗ | : | ಗ್ರಾಮ ಪಂಚಾಯಿತಿ ಕ್ಲರ್ಕ್ |
| ವಾಸ ಸ್ಥಳ | : | ಪಾಂಡೇಶ್ವರ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**<u>ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:</u>**

ಸಾಕ್ಷಿಗೆ ಎರಡು ಸ್ವತ್ತು ಸ್ವಾಧೀನತಾ ಮಹಜರನ್ನು ತೋರಿಸಲಾಗಿ, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದ್ರಿ ದಾಖಲೆಗಳನ್ನು ನಿಪಿ-10 ಮತ್ತು ನಿಪಿ-11 ಎಂದು, ಅವುಗಳಲ್ಲಿನ ಸಾಕ್ಷಿಯ ಸಹಿಗಳನ್ನು ನಿಪಿ-10(ಎ) ಮತ್ತು ನಿಪಿ-11(ಎ) ಎಂದು ಗುರುತಿಸಲಾಯಿತು. ಸದ್ರಿ ಸಹಿಯನ್ನು ಸುಮಾರು 10 ವರ್ಷಗಳ ಹಿಂದೆ ಪೊಲೀಸ್ ಠಾಣೆಯಲ್ಲಿ ಮಾಡಿರುತ್ತೇನೆ. ಕಳುವು ಆದ ಚಿನ್ನವನ್ನು ವಶಪಡಿಸಿಕೊಂಡ ಕಾರಣಕ್ಕೆ ಸಹಿ ಮಾಡಿರುತ್ತೇನೆ. ಸದ್ರಿ ದಾಖಲೆಯಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ. ನನ್ನ ಸಮಕ್ಷಮದಲ್ಲಿ ಪೊಲೀಸರು ಚಿನ್ನವನ್ನು ವಶಪಡಿಸಿಕೊಂಡಿರುತ್ತಾರೆ. ಸಾಕ್ಷಿಗೆ ಪೋಟೋಗಳನ್ನು ತೋರಿಸಲಾಗಿ ಅದರಲ್ಲಿರುವ ಚಿನ್ನವನ್ನು ನೋಡಿ ಗುರುತಿಸಲು ಈಗ ನೆನಪಿಲ್ಲ ಎಂದು ಹೇಳಿರುತ್ತಾರೆ. ನಾನು ನಿಪಿ-10 ಮತ್ತು 11 ದಾಖಲೆಗಳಿಗೆ ಸಹಿ ಮಾಡುವ ಸಮಯದಲ್ಲಿ ಬೇರೆ ಯಾರೂ ಇರಲಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಗೆ ವಿರುದ್ದವಾಗಿ ಸಾಕ್ಷಿ ನುಡಿದಿದ್ದರಿಂದ ಮಾನ್ಯ ಸ.ಸ.ಅ.ರವರು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)

**<u>ಪಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ</u>**

ದಿಃ 01-03-2013 ರಂದು ಸಾಸ್ತಾನದ ಮೂರ್ತೆದಾರರ ಸೇವಾ ಸಹಕಾರಿ ಸಂಘದಲ್ಲಿ ಆರೋಪಿ ಅಭಿಶೇಕ್ ಶೆಟ್ಟಿಗಾರ್ ರವರು ಅಡವಿಡಿಸಿದ ಚಿನ್ನದ ಸರವನ್ನು ನನ್ನ ಮತ್ತು ಚಾಸಾ-14 ರವರ ಸಮಕ್ಷಮದಲ್ಲಿ ಮಧ್ಯಾಹ್ನ 12 ರಿಂದ 1 ಗಂಟೆಯವರೆಗೆ ನಿಪಿ-10 ರಂತೆ ಮಹಜರು ಮಾಡಿ ವಶಪಡಿಸಿಕೊಂಡಿದ್ದು, ಸದ್ರಿ ದಾಖಲೆಗೆ ಸ್ಥಳದಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ದಿಃ 11-01-2013 ರಂದು ಸಾಸ್ತಾನದ ಮೂರ್ತೆದಾರರ ಸೇವಾ ಸಹಕಾರಿ ಸಂಘದಲ್ಲಿ ಆರೋಪಿ ಪ್ರಹ್ಲಾದ್ ರವರು ಅಡವಿಡಿಸಿದ ಚಿನ್ನದ ಲಕ್ಷ್ಮೀ ಪೆಂಡೆಂಟ್ ನ್ನು ನನ್ನ ಮತ್ತು ಚಾಸಾ-14 ರವರ ಸಮಕ್ಷಮದಲ್ಲಿ ಮಧ್ಯಾಹ್ನ 2-30 ರಿಂದ 3-15 ಗಂಟೆಯವರೆಗೆ ನಿಪಿ-11 ರಂತೆ ಮಹಜರು ಮಾಡಿ ವಶಪಡಿಸಿಕೊಂಡಿದ್ದು, ಸದ್ರಿ ದಾಖಲೆಗೆ ಸ್ಥಳದಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-10 ಮತ್ತು 11 ರಲ್ಲಿನ ಎಲ್ಲಾ ವಿಚಾರಗಳು ಗೊತ್ತಿದ್ದರೂ, ಸದ್ರಿ ದಾಖಲೆಗಳಿಗೆ ಸ್ಥಳದಲ್ಲಿಯೇ ಸಹಿ ಮಾಡಿದ್ದರೂ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಆರ್ ಕೆ ಎಂ ರವರಿಂದಃ</u>**

ಕದ್ದ ಚಿನ್ನವೆಂದು ಪೊಲೀಸರು ಹೇಳಿರುತ್ತಾರೆ. ಈ ಪ್ರಕರಣದಲ್ಲಿ ನನಗೆ ಯಾವುದೇ ಆಸಕ್ತಿ ಇಲ್ಲ. ಚಿನ್ನವನ್ನು ನಾನು ಗಮನಿಸಿರುವುದಿಲ್ಲ, ಕದ್ದವರು ಯಾರೂ, ಕಳಕೊಂಡವರು ಯಾರು ಎಂದು ಗೊತ್ತಿಲ್ಲ. ನಾನು ಬೇರೆ ಕೆಲಸದ ಮೇಲೆ ಪೊಲೀಸ್ ಠಾಣೆಗೆ ಹೋಗಿದ್ದಾಗ ನನ್ನ ಸಹಿ ಪಡೆದಿರುತ್ತಾರೆ, ನನಗೆ ಬೇರೆ ಯಾವುದೇ ವಿಚಾರ ಗೊತ್ತಿಲ್ಲ.

**<u>ಮರು ವಿಚಾರಣೆಃ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**